# ಡಾ. ಬಿ. ಆರ್. ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯದ ಚಿಂತನೆಗಳು

## ನಾಗನಗೌಡ ಗೌಡ್ರ

ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

DOI: https://doi.org/10.5281/zenodo.15504293

## ABSTRACT:

ಡಾ. ಬಿ.ಆರ್. ಅಂಬೇಡ್ಕರ್ ಒಬ್ಬ ಭಾರತೀಯ ಶ್ರೇಷ್ಠ ರಾಜಕೀಯ ನಾಯಕ, ತತ್ವಜ್ಞಾನಿ, ಸಾಮಾಜಿಕ ಚಿಂತಕ, ಇತಿಹಾಸ ಸಂಶೋಧಕ, ಆರ್ಥಿಕ ತಜ್ಞ, ಶ್ರೇಷ್ಠ ಬರಹಗಾರ, ಮಹಿಳಾ ಸಮಾನತೆಯ ಹರಿಕಾರ, ದಲಿತರ ಸೂರ್ಯ, ಕಾರ್ಮಿಕ ಬಂಧು, ಕಾನೂನು ತಜ್ಞ, ಸಂವಿಧಾನ ಶಿಲ್ಪಿ ಎಂದೆಲ್ಲಾ ಪ್ರಖ್ಯಾತರಾಗಿದ್ದಾರೆ. ಭಾರತೀಯ ಸಮಾಜವು ಶತ ಶತಮಾನಗಳಿಂದಲೂ ವರ್ಣ, ಜಾತಿಯ ಹೆಸರಿನಲ್ಲಿ ವರ್ಗೀಕರಣಗೊಂಡು ಇಡೀ ಮಾನವ ಸಂಬಂಧಗಳ ಮೌಲ್ಯವನ್ನೇ ಹಾಳು ಮಾಡಿದೆ. ಸಮಾಜದ ಬಹುಪಾಲು ಜನಾಂಗ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಬಲಿಷ್ಠವಾಗಿರುವ ಜಾತಿ, ವರ್ಗಗಳ ತುಳಿತಕ್ಕೆ ಸಿಲುಕಿ ನಲುಗಿವೆ. ಅಂಬೇಡ್ಕರ್‌ರವರು ಬಾಲ್ಯದಿಂದಲೂ ಕಂಡುಂಡ ಅಸ್ಪೃಶ್ಯತೆಯ ನೋವು ಅಪಮಾನಗಳು ಅವರನ್ನು ಸಾಮಾಜಿಕ ಚಿಂತನೆಡೆಗೆ ಮುಖ ಮಾಡುವಂತೆ ಪೇರೆಪಿಸಿದವು. ಅವರು ಶಿಕ್ಷಣ–ಸಂಘಟನೆ–ಹೋರಾಟ ಎಂಬ ತತ್ವಗಳನ್ನು ಪ್ರತಿಪಾದಿಸುವುದಷ್ಟೇ ಅಲ್ಲ ಅನುಷ್ಠಾನಗೊಳಿಸಿದ್ದಾರೆ. ಮೂಖನಾಯಕ, ಸಮತಾ, ಬಹಿಷ್ಕೃತ ಭಾರತ ಎಂಬ ಪತ್ರಿಕೆಗಳ ಮೂಲಕ ದಮನಿತರನ್ನು ಜಾಗೃತರಾಗಿಸಿದರು. 1924ರಲ್ಲಿ 'ಬಹಿಷ್ಕೃತ ಹಿತಕಾರಿಣಿ ಸಭಾ' ಸಂಸ್ಥೆಯನ್ನು ಪರಿಶಿಷ್ಟ ಜಾತಿಗಳ ಕಲ್ಯಾಣಕ್ಕೆ ಸ್ಥಾಪಿಸಿದರು. 'ಚೌಡಾರ್ ಕೆರೆ' ನೀರಿನ ಸತ್ಯಾಗ್ರಹ ಮತ್ತು ಕಾಲಾರಾಮ ದೇವಾಲಯ ಪ್ರವೇಶಕ್ಕಾಗಿ ಹೋರಾಟ ನಡೆಸಿ ಯಶಸ್ವಿಯಾದರು. ದುಂಡುಮೇಜಿನ ಸಮ್ಮೇಳನದಲ್ಲಿ ಅಸ್ಪೃಶ್ಯರ ಪ್ರತಿನಿಧಿಯಾಗಿ ಭಾಗವಹಿಸಿ ತಾರ್ಕಿಕ ವಾದ ಮಂಡಿಸಿ ಶಾಸನ ಸಭೆಗಳಲ್ಲಿ ಅಸ್ಪೃಶ್ಯರ ಮೀಸಲಾತಿಗಾಗಿ ಹೋರಾಡಿದರು. ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿ ಸಾಂವಿಧಾನಿಕ ಕಾನೂನಿನ ಚೌಕಟ್ಟಿನಲ್ಲಿ ದಲಿತರಿಗೆ, ಹಿಂದುಳಿದವರಿಗೆ, ಮಹಿಳೆಯರಿಗೆ ಶೈಕ್ಷಣಿಕ ಹಾಗೂ ಉದ್ಯೋಗದಲ್ಲಿ ಸೂಕ್ತ ಮೀಸಲಾತಿ ಸೌಲಭ್ಯ, ಸಮಾನತೆಯ ಹಕ್ಕು(ವಿಧಿ–14), ಅಸ್ಪೃಶ್ಯತೆ ನಿಷೇಧ(ವಿಧಿ–17), ಗೌರವದಿಂದ ಬದುಕುವ ಹಕ್ಕು(ವಿಧಿ–21) ಕಲ್ಪಿಸುವ ಮೂಲಕ ಸಾಮಾಜಿಕ ನ್ಯಾಯಕ್ಕಾಗಿ ಶ್ರಮಿಸಿದ್ದಾರೆ. ಅಂಬೇಡ್ಕರ್‌ರವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಂಸತ್ತಿನಲ್ಲಿ, ರಾಜ್ಯ ಶಾಸನಸಭೆಯಲ್ಲಿ ತಕ್ಕ ಪಾತಿನಿಧ್ಯವನ್ನು ಗಳಿಸಿಕೊಟ್ಟರು. ಕಾನೂನು ಮಂತ್ರಿಯಾಗಿ ಹಿಂದೂ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಕಲ್ಪಿಸುವುದಕ್ಕಾಗಿ 'ಹಿಂದೂ ಕೋಡ್ ಬಿಲ್'ನ್ನು ತಯಾರಿಸಿ ಸಂಸತ್ತಿನಲ್ಲಿ ಮಂಡಿಸಿ ಶತಾಯುಗತಾಯ ಪ್ರಯತ್ನಿಸಿದಾಗ್ಯೂ ಒಪ್ಪಿತವಾಗದ ಕಾರಣ ತಮ್ಮ ಮಂತ್ರಿ ಸ್ಥಾನಕ್ಕೆ 1951 ಸೆಪ್ಟಂಬರ್ 27 ರಂದು ರಾಜಿನಾಮೆ ನೀಡಿದರು. ಸಾಮಾಜಿಕ ನ್ಯಾಯವನ್ನು ಭಾರತ ಸಂವಿಧಾನದ ಆಧಾರ ಮತ್ತು ಸ್ಫೂರ್ತಿಯಾಗಿಸಿದ್ದಾರೆ. ಅವರು ನಡೆಸಿದ ಹೋರಾಟಗಳಲ್ಲಿ, ಮಾಡಿದ ಭಾಷಣಗಳಲ್ಲಿ, ರಚಿಸಿದ ಕೃತಿಗಳಲ್ಲಿ

ಅವರ ಸಾಮಾಜಿಕ ನ್ಯಾಯದ ಚಿಂತನೆಗಳನ್ನು ಕಾಣಬಹುದು. ಈ ಲೇಖನದಲ್ಲಿ ಅವರು ಸಾಮಾಜಿಕ ನ್ಯಾಯಕ್ಕಾಗಿ ನಡೆಸಿದ ಹೋರಾಟ ಮತ್ತು ಚಿಂತನೆಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

**KEYWORDS:**

ಸಾಮಾಜಿಕ ನ್ಯಾಯ, ಡಾ. ಬಿ ಆರ್ ಅಂಬೇಡ್ಕರ್, ಭಾರತ ಸಂವಿಧಾನ, ಸಮಾನತೆ, ಸ್ವಾತಂತ್ರ್ಯ, ಬ್ರಾತೃತ್ವ, ಮೀಸಲಾತಿ, ಅಸ್ಪೃಶ್ಯತೆ, ಜಾತಿ ವ್ಯವಸ್ಥೆ.

**ಪ್ರಸ್ತಾವನೆ:**

ಸಾಮಾಜಿಕ ನ್ಯಾಯವು ಸಮಾಜದೊಳಗಿನ ಸಂಪನ್ಮೂಲಗಳು, ಅವಕಾಶಗಳು ಮತ್ತು ಸವಲತ್ತುಗಳ ನ್ಯಾಯಬದ್ದ ಮತ್ತು ಸಮಾನ ಹಂಚಿಕೆಯನ್ನು ಪ್ರತಿಪಾದಿಸುವ ಪರಿಕಲ್ಪನೆಯಾಗಿದೆ. ಭಾರತ ಸಂವಿಧಾನದ ಪೂರ್ವ ಪೀಠಿಕೆಯನ್ನು ಸಾಮಾಜಿಕ ನ್ಯಾಯದ ಕನ್ನಡಿ ಎನ್ನಲಾಗಿದೆ. ಡಾ ಬಿ ಆರ್ ಅಂಬೇಡ್ಕರ್ ಒಬ್ಬ ಭಾರತೀಯ ಶ್ರೇಷ್ಠ ರಾಜಕೀಯ ನಾಯಕ, ತತ್ವಜ್ಞಾನಿ, ಸಾಮಾಜಿಕ ಚಿಂತಕ, ಇತಿಹಾಸ ಸಂಶೋಧಕ, ಆರ್ಥಿಕ ತಜ್ಞ, ಶ್ರೇಷ್ಠ ಬರಹಗಾರ, ಮಹಿಳಾ ಸಮಾನತೆಯ ಹರಿಕಾರ, ದಲಿತರ ಸೂರ್ಯ, ಕಾರ್ಮಿಕ ಬಂಧು, ಕಾನೂನು ತಜ್ಞ, ಸಂವಿಧಾನ ಶಿಲ್ಪಿ ಎಂದೆಲ್ಲಾ ಪ್ರಖ್ಯಾತರಾಗಿದ್ದಾರೆ. ಭಾರತೀಯ ಸಮಾಜವು ಶತ ಶತಮಾನಗಳಿಂದಲೂ ವರ್ಣ, ಜಾತಿಯ ಹೆಸರಿನಲ್ಲಿ ವರ್ಗೀಕರಣಗೊಂಡು ಇಡೀ ಮಾನವ ಸಂಬಂಧಗಳ ಮೌಲ್ಯವನ್ನೇ ಹದಗೆಡುವಂತೆ ಮಾಡಿದೆ. ಸಮಾಜದ ಬಹುಪಾಲು ಜನಾಂಗ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಬಲಿಷ್ಠವಾಗಿರುವ ಜಾತಿ, ವರ್ಗಗಳ ತುಳಿತಕ್ಕೆ ಸಿಲುಕಿ ನಲುಗಿವೆ. ತಳ ಸಮುದಾಯಗಳು ಶೋಷಣೆಗೊಳಪಡುವುದು, ಆಳಿಸಿಕೊಳ್ಳುವುದು ನಮ್ಮ ಜನ್ಮ ಸಿದ್ಧ ಹಕ್ಕು ಎಂಬಂತೆ ಒಪ್ಪಿಕೊಂಡು ಬಂದಿದ್ದವು. ಅಂಬೇಡ್ಕರ್ ಅವರು ಬಾಲ್ಯದಿಂದಲೂ ಕಂಡುಂಡ ಅಸ್ಪೃಶ್ಯತೆಯ ನೋವು ಅಪಮಾನಗಳು ಅವರನ್ನು ಸಾಮಾಜಿಕ ಚಿಂತನೆಡೆಗೆ ಮುಖ ಮಾಡುವಂತೆ ಪೇರೆಪಿಸಿದವು. ಸಾಂವಿಧಾನಿಕ ಕಾನೂನಿನ ಚೌಕಟ್ಟಿನಲ್ಲಿ ದಲಿತರಿಗೆ, ಹಿಂದುಳಿದವರಿಗೆ, ಮಹಿಳೆಯರಿಗೆ ಶೈಕ್ಷಣಿಕ ಹಾಗೂ ಉದ್ಯೋಗದಲ್ಲಿ ಸೂಕ್ತ ಮೀಸಲಾತಿ ಸೌಲಭ್ಯ, ಸಮಾನತೆಯ ಹಕ್ಕು, ಅಸ್ಪೃಶ್ಯತೆ ನಿಷೇಧ, ಗೌರವದಿಂದ ಬದುಕುವ ಹಕ್ಕು ಕಲ್ಪಿಸುವ ಮೂಲಕ ಸಾಮಾಜಿಕ ನ್ಯಾಯವನ್ನು ಭಾರತ ಸಂವಿಧಾನದ ಆಧಾರ ಮತ್ತು ಸ್ಪೂರ್ತಿಯಾಗಿಸಿದ್ದಾರೆ. ಅವರು ನಡೆಸಿದ ಹೋರಾಟಗಳಲ್ಲಿ, ಭಾಷಣಗಳಲ್ಲಿ, ರಚಿಸಿದ ಕೃತಿಗಳಲ್ಲಿ ಅವರ ಸಾಮಾಜಿಕ ನ್ಯಾಯದ ಚಿಂತನೆಗಳನ್ನು ಕಾಣಬಹುದು. ಈ ಲೇಖನದಲ್ಲಿ ಅವರು ಸಾಮಾಜಿಕ ನ್ಯಾಯಕ್ಕಾಗಿ ನಡೆಸಿದ ಹೋರಾಟ ಮತ್ತು ಚಿಂತನೆಗಳನ್ನು ವಿಶ್ಲೇಷಿಸುವ ಪ್ರಯತ್ನ

ಮಾಡಲಾಗಿದೆ.

**ಸಾಮಾಜಿಕ ನ್ಯಾಯದ ಪರಿಕಲ್ಪನೆ:**

ಸಾಮಾಜಿಕ ನ್ಯಾಯ ಎಂದರೆ ಎಲ್ಲ ಜನರಿಗೂ ತಮ್ಮ ವ್ಯಕ್ತಿತ್ವ ಬೆಳೆಸಿಕೊಳ್ಳಲು ಸಮಾನ ಅವಕಾಶಗಳನ್ನು ಕಲ್ಪಿಸುವುದಾಗಿದೆ. ಇದು ಅಸಮಾನತೆಗಳನ್ನು ವ್ಯವಸ್ಥಿತವಾಗಿ ಪರಿಹರಿಸಿ ಎಲ್ಲಾ ವ್ಯಕ್ತಿಗಳಿಗೆ ಅವರ ಜನಾಂಗ, ಲಿಂಗ, ವರ್ಗ, ಜಾತಿ, ಧರ್ಮ, ಸಾಮರ್ಥ್ಯ ಅಥವಾ ಇತರ ಸಾಮಾಜಿಕ ವರ್ಗಗಳನ್ನು ಪರಿಗಣಿಸದೇ ಅವರು ಘನತೆ, ಗೌರವದಿಂದ ಬಾಳಲು ಅತ್ಯವಶ್ಯಕವಾದ ಮಾನವ ಹಕ್ಕುಗಳನ್ನು ಒದಗಿಸಬೇಕೇಂದು ಪ್ರತಿಪಾದಿಸುತ್ತದೆ. ಸಾಮಾಜಿಕವಾಗಿ ಹಿಂದುಳಿದ ಭಾರತದಂತಹ ದೇಶದಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆಯು ಹೆಚ್ಚು ಚರ್ಚೆಗೆ ಗ್ರಾಸವಾಗಿದೆ. ಸಾಮಾನ್ಯ ಅರ್ಥದಲ್ಲಿ ಅಸಮಾನತೆಯನ್ನು ತೊಡೆದು ಹಾಕಿ, ಮಾನವ ಸಮಾಜದಲ್ಲಿ ಸಮಾನತೆಯನ್ನು ಸ್ಥಾಪಿಸುವುದೇ ಸಾಮಾಜಿಕ ನ್ಯಾಯ ಎನಿಸಿಕೊಂಡರೂ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಅಸಮಾನತೆಗಳು ಹಾಗೂ ಲಿಂಗ ತಾರಮ್ಯತೆಯಂತಹ ಪ್ರಮುಖ ಲಕ್ಷಣಗಳಿರುವ ಈ ದೇಶದಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆಯು ವಿಸ್ತೃತವಾದ ನೆಲೆಗಟ್ಟನ್ನು ಹೊಂದಿದೆ. 'ಮಾನವ ಮೂಲತಃ ಸಮಾಜ ಜೀವಿ. ಹಾಗೆಯೇ ರಾಜಕೀಯ ಜೀವಿಯೂ ಹೌದು. ಸಮಾಜದಲ್ಲಿರದ ವ್ಯಕ್ತಿ ದೇವರಾಗಿರಬೇಕು, ಇಲ್ಲವೇ ಪಶುವಾಗಿರಬೇಕು' ಎಂಬ ರಾಜ್ಯಶಾಸ್ತ್ರದ ಪಿತಾಮಹ ಅರಿಸ್ಟಾಟಲ್ ಅಭಿಪ್ರಾಯದ ಹಿನ್ನೆಲೆಯಲ್ಲಿ ಸಮಾಜದಲ್ಲಿರುವ ಪ್ರತಿಯೊಬ್ಬರಿಗೂ ಸಮಾನ ಹಕ್ಕು, ಅವಕಾಶಗಳು ಹಾಗೂ ಮನೋಧರ್ಮಗಳಿರಬೇಕಾಗುತ್ತದೆ. ಮತ್ತೋರ್ವ ಶ್ರೇಷ್ಠ ರಾಜಕೀಯ ಚಿಂತಕ ಜೆ ಜೆ ರೂಸೋ "ಮಾನವ ಹುಟ್ಟುತಃ ಸರ್ವ ಸ್ವತಂತ್ರ ಆದರೆ ಎಲ್ಲೆಡೆಯೂ ಸಂಕೋಲೆಗಳಿಂದ ಬಂಧಿತನಾಗಿದ್ದಾನೆ" ಎಂದಿದ್ದಾರೆ. ಅಂದರೆ ನೈಸರ್ಗಿಕವಾಗಿ ಮನುಷ್ಯ ಸಮಾನವಾಗಿ ಜನಿಸಿರುವನು, ಆದರೆ ಸಮಾಜದಲ್ಲಿ ಬೆಳೆಯುತ್ತಾ ಹಂತ ಹಂತವಾಗಿ ಕುಟುಂಬ, ಜಾತಿ, ಧರ್ಮ, ಲಿಂಗ, ಮುಂತಾದ ವಿಷಯಗಳಲ್ಲಿ ಆಚಾರ-ವಿಚಾರ, ರೂಢಿ ಸಂಪ್ರದಾಯ, ಕಾನೂನುಗಳೆಂಬ ವಿವಿಧ ಸಂಕೋಲೆಗಳಲ್ಲಿ ಬಂಧಿತನಾಗಿದ್ದಾನೆ. ಇದರಿಂದ ಸಮಾಜದಲ್ಲಿ ಕೆಲವು ನಿರ್ದಿಷ್ಟ ಸಮೂದಾಯಗಳ ಹಕ್ಕುಗಳಿಗೆ ದಕ್ಕೆಯುಂಟಾಗಿರುವುದನ್ನು ಗುರುತಿಸಬಹುದು.

**ಡಾ. ಬಿ.ಆರ್. ಅಂಬೇಡ್ಕರ್‌ರವರ ಸಾಮಾಜಿಕ ನ್ಯಾಯದ ಚಿಂತನೆಗಳು ಮತ್ತು ಹೋರಾಟಗಳು:**

"ಸಾಮಾಜಿಕ ನ್ಯಾಯ ತತ್ವವು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಸಮಾನತೆಗಳೆಂಬುವು ಸಮಾಜದಲ್ಲಿ ಇರಬಾರದೆಂದು ಹೇಳುತ್ತದೆ".

ಅಂಬೇಡ್ಕರ್‌ರವರ ಸಾಮಾಜಿಕ ನ್ಯಾಯದ ಚಿಂತನೆಯು ಮೂರು ಬಗೆಯ ನ್ಯಾಯವನ್ನು ಒಳಗೊಂಡಿದೆ. ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಇವುಗಳ ಮೇಲೆ ಆಧಾರಿತವಾದ ಸಾಮಾಜಿಕ, ರಾಜಕೀಯ, ಆರ್ಥಿಕ ನ್ಯಾಯವಾಗಿದೆ. ಅವರು ಸಾಮಾಜಿಕ ನ್ಯಾಯಕ್ಕೆ ಮೊದಲ ಆದ್ಯತೆಯನ್ನು, ಆರ್ಥಿಕ ನ್ಯಾಯಕ್ಕೆ ಎರಡನೇಯ ಆದ್ಯತೆಯನ್ನು, ರಾಜಕೀಯ ನ್ಯಾಯಕ್ಕೆ ಕೊನೆಯ ಆದ್ಯತೆಯನ್ನು ನೀಡಿದ್ದಾರೆ. ಸಾಮಾಜಿಕ ನ್ಯಾಯವಿಲ್ಲದೇ ಆರ್ಥಿಕ ಮತ್ತು ರಾಜಕೀಯ ನ್ಯಾಯ ನಿರರ್ಥಕ ಮತ್ತು ಉಳಿಯಲಾರವು ಎಂದು ನಂಬಿದ್ದರು. ಅಂದರೆ ಸಮಾಜದಲ್ಲಿ ಒಬ್ಬ ವ್ಯಕ್ತಿಗೆ ಸಾಮಾನ್ಯ ನಾಗರಿಕನಾಗಿ ಇತರರಂತೆ ಜಾತಿ, ಧರ್ಮ, ಲಿಂಗ ಬೇಧವಿಲ್ಲದೇ ಬದುಕು ಸಾಗಿಸುವ ವಾತಾವರಣ ನಿರ್ಮಾಣವಾಗುವುದೇ ಸಾಮಾಜಿಕ ನ್ಯಾಯದ ಸ್ಥಾಪನೆಯಾಗಿದೆ. ಇದು ದೊರೆತ ನಂತರವೇ ಆತನಿಗೆ ಆರ್ಥಿಕವಾಗಿ ಶಕ್ತನಾಗಲು ಮುಕ್ತ ಉದ್ಯೋಗಾವಕಾಶಗಳು ದೊರೆತು, ಸಮಾನ ಸಂಪತ್ತಿನ ಹಂಚಿಕೆಯೆಡೆಗಿನ ನಡಿಗೆಯೇ ಆರ್ಥಿಕ ನ್ಯಾಯ ಎನಿಸಿಕೊಳ್ಳುತ್ತದೆ. ಇವುಗಳಿಲ್ಲದೇ ರಾಜಕೀಯ ಅಧಿಕಾರವೊಂದರಿಂದಲೇ ಸಮಾಜದಲ್ಲಿ ಸಮಾನತೆಯು ನಿರ್ಮಾಣವಾಗಲಾರದು ಎಂಬುದು ನನ್ನ ವಿಚಾರವಾಗಿದೆ ಎನ್ನುತ್ತಾರೆ. ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಇವುಗಳನ್ನು ಅನುಸರಿಸದ ಆದರ್ಶ ಸಿದ್ಧಾಂತಗಳನ್ನು ಅಂಬೇಡ್ಕರ್ ತಿರಸ್ಕರಿಸುತ್ತಾರೆ.

1916 ಮೇ 9 ರಂದು ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ನಡೆದ ಮಾನವಕುಲಶಾಸ್ತ್ರ ವಿಚಾರ ಸಂಕಿರಣದಲ್ಲಿ 'ಭಾರತದೊಳಗಿನ ಜಾತಿಗಳು: ಅವುಗಳ ಹುಟ್ಟು, ಕಾರ್ಯವಿಧಾನ ಮತ್ತು ವಿಕಾಸ' ಎಂಬ ಪ್ರಬಂಧ ಮಂಡಿಸುತ್ತಾ 'ನಿಜವಾದ ರಾಷ್ಟ್ರೀಯತೆಯ ಹಾದಿಯಲ್ಲಿ ಜಾತಿಯ ತಡೆಗೋಡೆ ದೊಡ್ಡ ಕಂಟಕವಾಗಿದೆ' ಎಂಬ ಸಂದೇಶವನ್ನು ಭಾರತೀಯರಿಗೆ ತಲುಪಿಸುವಲ್ಲಿ ಯಶಸ್ವಿಯಾದರು. ಎಲ್ಲಿಯವರೆಗೂ ಜಾತಿಯು ಭಾರತದಲ್ಲಿ ಪ್ರಬಲವಾಗಿರುತ್ತದೆಯೋ ಅಲ್ಲಿಯವರೆಗೂ ಹಿಂದೂಗಳು ಬೇರೆ ಜಾತಿಯವರೊಂದಿಗೆ ಮದುವೆಯಾಗಲಾರರು, ಬೇರೆಯವರೊಂದಿಗೆ ಸಾಮಾಜಿಕ ಸಂಬಂಧ ಏರ್ಪಡಿಸಿಕೊಳ್ಳಲಾರರು. ಈ ಭೂಮಿಯ ಮೇಲಿನ ಮತ್ತಾವುದೇ ಪ್ರದೇಶಗಳಿಗೆ ಹಿಂದೂಗಳು ವಲಸೆ ಹೋದರೇ, ಭಾರತದ ಜಾತಿಯು ಒಂದು ಜಾಗತಿಕ ಸಮಸ್ಯೆಯಾಗಿ ಪರಿಣಮಿಸುತ್ತದೆ' ಎಂದು ಅಭಿಪ್ರಾಯ ಪಡುತ್ತಾರೆ. ಅಂಬೇಡ್ಕರ್‌ರವರು ಶೋಷಿತರ ಪರವಾದ ತಮ್ಮ ಹೋರಾಟವನ್ನು 'ಮೂಕ ನಾಯಕ' ಎಂಬ ಪತ್ರಿಕೆಯ ಮೂಲಕ ಆರಂಭಿಸಿದರು. ಸಮಾಜದಲ್ಲಿಯ ಅಸಮಾನತೆಗೆ ಮೂಲ ಕಾರಣವಾದ ಜಾತಿ ವ್ಯವಸ್ಥೆಯನ್ನು ತೀವ್ರವಾಗಿ ಖಂಡಿಸುತ್ತಾ ತುಳಿತಕ್ಕೊಳಗಾದವರಲ್ಲಿ ತಮ್ಮ ಹಕ್ಕುಗಳಿಗಾಗಿ ಹೋರಾಡಲು ಜಾಗೃತಿಯುಂಟು ಮಾಡಿದರು. ಹಿಂದೂ ಮೇಲ್ಜಾತಿಗಳು ಪರಿಶಿಷ್ಟ ಜಾತಿ ಸಮೂದಾಯಗಳನ್ನು ಕಾನೂನುಬದ್ದ ಹಕ್ಕು, ಸೌಲಭ್ಯಗಳಿಂದ ಹೇಗೆ ವಂಚಿಸುತ್ತಾ ಬಂದಿವೆ ಎಂಬುದನ್ನು

ಬಹಿರಂಗಗೊಳಿಸಿದರು. ಸೌತ್‌ಬರೋ ಸಮಿತಿಯ ಮುಂದೆ ಹಾಜರಾಗಿ ಸಾಕ್ಷಗಳನ್ನು ನೀಡುತ್ತಾ ವಯಸ್ಕ ಮತದಾನ ಮತ್ತು ಪರಿಶಿಷ್ಟರಿಗೆ ಪ್ರತ್ಯೇಕ ಪ್ರಾತಿನಿಧ್ಯಕ್ಕಾಗಿ ವಾದ ಮಂಡಿಸಿದರು.

1924ರಲ್ಲಿ 'ಬಹಿಷ್ಕೃತ ಹಿತಕಾರಿಣಿ ಸಭಾ' ಎಂಬ ಸಂಸ್ಥೆಯನ್ನು ಪರಿಶಿಷ್ಟ ಜಾತಿಗಳ ಕಲ್ಯಾಣಕ್ಕೆ ಸ್ಥಾಪಿಸಿದರು. ಕೇವಲ ಬರಹ ಭಾಷಣಗಳಿಂದ ತೃಪ್ತರಾಗದ ಇವರು ಸಾಮಾಜಿಕ ನ್ಯಾಯ ಸ್ಥಾಪನೆಗಾಗಿ ಚಳುವಳಿಯ ಹಾದಿಯನ್ನು ತುಳಿದರು. ಕೊಲಾಬಾ ಜಿಲ್ಲೆಯ ಮಹಾಡ್ ಗ್ರಾಮದಲ್ಲಿ 'ಚೌಡಾರ್ ಕೆರೆ' ನೀರಿನ ಮೇಲೆ ಅಸ್ಪೃಶ್ಯ ಸಮುದಾಯಗಳ ಹಕ್ಕನ್ನು ಸಾಬಿತು ಪಡಿಸಲು ಸಾವಿರಾರು ಜನರೊಟ್ಟಿಗೆ ಸೇರಿ ಸತ್ಯಾಗ್ರಹ ನಡೆಸಿ ಯಶಸ್ವಿಯಾದರು. ನಾಸಿಕ್‌ನಲ್ಲಿರುವ 'ಕಾಲಾರಾಮ ದೇವಾಲಯ ಪ್ರವೇಶ'ಕ್ಕಾಗಿ ಸಾವಿರಾರು ಅಸ್ಪೃಶ್ಯರೊಂದಿಗೆ ಹೋರಾಟ ನಡೆಸಿದರು. ಸಾವಿರಾರು ಮಂದಿ ಅಸ್ಪೃಶ್ಯರು ನಾಗರಿಕ ಹಕ್ಕುಗಳನ್ನು ಪಡೆಯುವುದಕ್ಕಾಗಿ ಪಾಲ್ಗೊಂಡ ಈ ಎರಡು ಸತ್ಯಾಗ್ರಹಗಳು ಸಾಮಾಜಿಕ ನ್ಯಾಯ ಒದಗಿಸುವ ಅಂಬೇಡ್ಕರ್‌ರವರ ದಿಟ್ಟ ಕ್ರಮಗಳಾಗಿದ್ದವು.

1927 ಡಿಸೆಂಬರ್ 25 ರಂದು ರಾತ್ರಿ 9:00 ಕ್ಕೆ ಸಾಂಕೇತಿಕವಾಗಿ ಮನುಸ್ಮೃತಿ ಪುಸ್ತಕವನ್ನು ಸಾಮೂಹಿಕವಾಗಿ ಬೆಂಕಿ ಹಚ್ಚಿ ಸುಡಲಾಯಿತು. ಮಹಾಡ್ ಸಮಾವೇಶ ಮುಗಿದ ಕೆಲವು ದಿನಗಳ ನಂತರ ಅಂಬೇಡ್ಕರ್‌ರವರು ಮನಸ್ಮೃತಿಯನ್ನು ದಹಿಸಿದ ಸಂಗತಿ ನೆನಪಿಸಿಕೊಳ್ಳುತ್ತ ಹೀಗೆ ಹೇಳಿದರು. "ಮನುಸ್ಮೃತಿ ದಹನವನ್ನು ತಾವು ಕೇವಲ ದ್ವೇಷ ಸಾಧನೆಗೆ ಮಾಡಿರಲಿಲ್ಲ. ಭಯಂಕರ ರೋಗಕ್ಕೆ ಭಯಂಕರವಾದ ಚುಚ್ಚುಮದ್ದನ್ನೇ ಕೊಡಬೇಕಾಗುವಂತೆ, ಕಿವುಡ ಸಮಾಜದ ಗಮನಸೆಳೆಯಲು ಬಾಂಬ್ ಸ್ಫೋಟಿಸಬೇಕಾಗುವಂತೆ ತಾವು ಸನಾತನವಾದಿ ಹಿಂದೂ ಸಮಾಜದ ಹೃದಯವನ್ನು ಚುಚ್ಚಲು ಮನುಸ್ಮೃತಿ ದಹನ ಕಾರ್ಯಕ್ರಮ ಹಮ್ಮಿಕೊಳ್ಳಬೇಕಾಯಿತು. ಮನಸ್ಮೃತಿಯ ಎಲ್ಲಾ ಪುಟಗಳು ಖಂಡನಾರ್ಹವಾಗಿವೆ ಎಂದು ನಾನಾದರೂ ಹೇಳುವುದಿಲ್ಲ. ಅದನ್ನು ನಾನು ಆಳವಾಗಿ ಅಭ್ಯಾಸ ಮಾಡಿದ್ದೇನೆ. ಆದರೆ ಸನಾತನವಾದಿ ಹಿಂದುಗಳು ಸತ್ಯದತ್ತ, ಅನ್ಯಾಯದತ್ತ, ಅಸಮಾನತೆಯತ್ತ ಹಾಗೂ ಒಟ್ಟಾರೆ ಅಮಾನವಿಯತೆಯತ್ತ ಕಣ್ ತೆರೆಯುವಂತೆ ಮಾಡಲು ನಾನು ಅದನ್ನು ಸುಟ್ಟು ಹಾಕಿದೆ, ಮನುಸ್ಮೃತಿಯಿಂದ ಕೇವಲ ಸಾಮಾಜಿಕವಾದ ಅನ್ಯಾಯವಷ್ಟೇ ಆಗಿಲ್ಲ. ಅದರಿಂದ ಘೋರವಾದ ಆರ್ಥಿಕ, ರಾಜಕೀಯ ಹಾಗೂ ಧಾರ್ಮಿಕ ಅನ್ಯಾಯ ನಡೆದಿದೆ. ಶೂದ್ರ ಮತ್ತು ಮಹಿಳೆಯರ ಸಮಸ್ತ ಸಂಕಟಕ್ಕೆ ಕಾರಣವಾದ ಮನುಸ್ಮೃತಿಯ ಮೇಲೆ ಮುಗಿ ಬೀಳದೆ ನಮಗೆ ಇನ್ಯಾವ ದಾರಿ ಇತ್ತು? ಎಂದು ಪ್ರಶ್ನಿಸುತ್ತಾರೆ".

ಅಸ್ಪೃಶ್ಯರು ಶಿಕ್ಷಣವಂತರಾದರೆ ಮಾತ್ರ ತಮ್ಮ ಸ್ಥಿತಿಯಿಂದ ವಿಮುಕ್ತರಾಗಬಲ್ಲರು

ಎಂಬುದನ್ನು ಮನಗಂಡ ಅಂಬೇಡ್ಕರ್‌ರವರು 1928ರಲ್ಲಿ ದಲಿತರಿಗಾಗಿ ಉಚಿತ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದರು. ವಿದ್ಯಾರ್ಥಿಗಳಿಗಾಗಿ ಶಿಕ್ಷಣ ಸಂಸ್ಥೆಗಳನ್ನು ಕೂಡ ಆರಂಭಿಸಿ ಪ್ರಾಥಮಿಕ ಶಿಕ್ಷಣದಿಂದ ಪದವಿಯವರೆಗೆ ಉಚಿತ ಶಿಕ್ಷಣ ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸುವಲ್ಲಿ ಯಶಸ್ವಿಯಾದರು. "ಶಿಕ್ಷಣ ಸಂಘಟನೆ ಮತ್ತು ಹೋರಾಟ" ಎಂಬ ಅಮೂಲ್ಯವಾದ ಮೂರು ಸೂತ್ರಗಳನ್ನು ನೀಡಿದರು. ಬಾಬಾಸಾಹೇಬ್ ಅಂಬೇಡ್ಕರ್‌ರವರು ತಮ್ಮ ಜೀವನೋಪಾಯಕ್ಕಾಗಿ ಸರ್ಕಾರಿ ಅಥವಾ ಖಾಸಗಿ ನೌಕರಿಯನ್ನು ಮಾಡಬಾರದೆಂದು ತೀರ್ಮಾನಿಸಿ ತಮಗೆ ಜೀವನೋಪಾಯಕ್ಕೆ ಆಗುವಷ್ಟು ದುಡಿದು ಶೋಷಿತ ಸಮುದಾಯಗಳ ಸೇವೆ ಮಾಡಬೇಕೆಂದು ತೀರ್ಮಾನಿಸಿದರು. "ಅಸ್ಪೃಶ್ಯರ ಸ್ಥಾನಮಾನಗಳನ್ನು ಎತ್ತರಿಸುತ್ತೇನೆ ಇಲ್ಲವೇ ತಾನು ಆಶಿಸಿರುವ ಗುರಿ ಸಾಧಿಸಲು ವಿಫಲವಾದರೆ ಪಿಸ್ತೂಲು ಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ತಮ್ಮಲ್ಲಿ ಸಾಕಷ್ಟು ಹಣವಿರುತ್ತದೆ". ಎಂಬ ಅವರ ನುಡಿಯಲ್ಲಿ ಶೋಷಿತ ಸಮೂದಾಯಗಳಿಗೆ ಸಾಮಾಜಿಕ ನ್ಯಾಯ ಒದಗಿಸುವ ಛಲ ಮತ್ತು ಬದ್ಧತೆಯನ್ನು ಕಾಣಬಹುದು.

ಭಾರತ ಸಂವಿಧಾನದ ಪೂರ್ವ ಪೀಠಿಕೆಯಲ್ಲಿ ಕಂಡು ಬರುವ ಪ್ರಜಾಪ್ರಭುತ್ವ, ಸಮಾಜವಾದ, ಜ್ಯಾತ್ಯಾತೀತತೆ, ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಬ್ರಾತೃತ್ವ, ಏಕತೆ ಮತ್ತು ಸಮಗ್ರತೆಯಂತಹ ಪದಗಳು ಕೇವಲ ಪದಗಳಾಗಿರದೇ ಸಂವಿಧಾನದ ಗುರಿಯನ್ನು ಸ್ಪಷ್ಟಪಡಿಸುವ ಮೂಲ ತತ್ವಗಳಾಗಿವೆ. ಇವುಗಳಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ ಎಂಬ ತತ್ವ ಪ್ರತಿಯೊಬ್ಬ ಭಾರತೀಯ ಪ್ರಜೆಗೂ ಸಾಮಾಜಿಕ ನ್ಯಾಯ ಒದಗಿಸುವ ಗುರಿಯನ್ನು ಸ್ಪಷ್ಟಪಡಿಸುತ್ತದೆ. ಚಾತುರ್ವರ್ಣ ವ್ಯವಸ್ಥೆಯಿಂದ ದೇಶದ ಬಹುಸಂಖ್ಯಾತ ವರ್ಗ ಶತಮಾನಗಳಿಂದ ಅಸ್ಪೃಶ್ಯತೆ ಎಂಬ ಕೂಪಕ್ಕೆ ಸಿಕ್ಕು ಸಾರ್ವಜನಿಕ ಕೆರೆ, ಬಾವಿ, ದೇವಸ್ಥಾನ, ಬೀದಿಗಳಲ್ಲಿ ಮುಕ್ತ ಪ್ರವೇಶಾವಕಾಶವಿರದೇ ನರಕ ಸದೃಶ್ಯ ಜೀವನ ಸಾಗಿಸಿತ್ತು. ಅಂಬೇಡ್ಕರ್‌ರವರು ಸಂವಿಧಾನದ ಮೂರನೇ ಭಾಗದಲ್ಲಿ ವಿಧಿ 14 ರಡಿಯಲ್ಲಿ ಕಾನೂನಿನೆದುರು ಎಲ್ಲರೂ ಸಮಾನರು ಎಂಬುದಾಗಿ, ವಿಧಿ 15 ರಲ್ಲಿ ಧರ್ಮ, ಮೂಲವಂಶ, ಜಾತಿ, ಲಿಂಗ ಅಥವಾ ಜನ್ಮಸ್ಥಳದ ಆಧಾರಗಳ ಮೇಲೆ ತಾರತಮ್ಯದ ನಿಷೇದ ಈ ಮೂಲಕ ಹಿಂದೆ ಇದ್ದಂತೆ ಮೇಲಿನ ಯಾವುದೋ ಒಂದು ಅಂಶಗಳನ್ನಾಧರಿಸಿ ಒಬ್ಬ ವ್ಯಕ್ತಿಯನ್ನು ಸಾರ್ವಜನಿಕ ಸ್ಥಳಗಳಾದ ಹೋಟೇಲ್, ಸಂತೆ, ಮನರಂಜನಾ ತಾಣ, ಉದ್ಯಾನವನಗಳಿಗೆ ಹಾಗೂ ಕೆರೆ, ಭಾವಿ, ರಸ್ತೆಗಳಿಗೆ ಪ್ರವೇಶಿಸುವ ನಿರ್ಭಂದವನ್ನು ತೆಗೆದು ಹಾಕಲಾಯಿತು. ವಿಧಿ 16 ರನ್ವಯ ಸಮಾನ ಉದ್ಯೋಗಾವಕಾಶಗಳಲ್ಲಿ ಸಮಾನ ಅವಕಾಶಗಳನ್ನು ಕಲ್ಪಿಸಲಾಗಿದೆ. ವಿಧಿ 17 ರನ್ವಯ ಅಸ್ಪೃಶ್ಯತೆ ನಿರ್ಮೂಲನೆಗೊಳಿಸಲಾಗಿದೆ ಮತ್ತು ಯಾವುದೇ ರೂಪದಲ್ಲಿ ಅದರ ಆಚರಣೆಯನ್ನು

ನಿಷೇದಿಸಲಾಗಿದೆ. 'ಅಸ್ಪೃಶ್ಯತೆ'ಯಿಂದ ಉದ್ಭವಿಸುವ ಯಾವುದೇ ಅಸಮರ್ಥತೆಯನ್ನು ಆಚರಣೆಗೆ ತರುವುದು ಕಾನೂನಿಗನುಸಾರವಾಗಿ ದಂಡನೀಯವಾದ ಅಪರಾಧವಾಗತಕ್ಕದ್ದು ಎಂದು ಸೇರಿಸಲಾಗಿದೆ. ವಿಧಿ 19 ರಡಿಯಲ್ಲಿ ಪ್ರತಿಯೊಬ್ಬ ಭಾರತೀಯನಿಗೂ ಸ್ವಾತಂತ್ರ್ಯದ ಹಕ್ಕು: ಅಭಿವ್ಯಕ್ತಿ ಸ್ವಾತಂತ್ರ್ಯ, ಸಂಚಾರ ಸ್ವಾತಂತ್ರ್ಯ, ವೃತ್ತಿ ಸ್ವಾತಂತ್ರ್ಯ, ಭಾರತದ ಯಾವುದೇ ಪ್ರದೇಶಕ್ಕೆ ಹೋಗಿ ವಾಸಿಸುವ ಸ್ವಾತಂತ್ರ್ಯ ಹೀಗೇ ಹಲವು ಸ್ವಾತಂತ್ರ್ಯಗಳನ್ನು ಒದಗಿಸುವ ಮೂಲಕ ಸ್ತ್ರೀ ಸೇರಿದಂತೆ ಶೋಷಿತ ಸಮುದಾಯಗಳಿಗೆ ಹಲವು ನಿರ್ಬಂಧಗಳಿಂದ ಮುಕ್ತಿ ಒದಗಿಸಲಾಗಿದೆ. ವಿಧಿ 23(1) ಮಾನವ ಸಾಗಾಟ ಮತ್ತು ಒತ್ತಾಯದ ದುಡಿಮೆ(ಜೀತ ಪದ್ಧತಿ) ನಿಷೇದ. ವಿಧಿ 32 ರಡಿಯಲ್ಲಿ ಹಕ್ಕುಗಳಿಗೆ ಚ್ಯುತಿಯುಂಟಾದಾಗ ನೇರವಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗುವ ಹಕ್ಕು ಒದಗಿಸಲಾಗಿದೆ.

ಸಂವಿಧಾನದ 4ನೇ ಭಾಗದ ರಾಜ್ಯ ನಿರ್ದೇಶಕ ತತ್ವಗಳಲ್ಲಿ ದಲಿತ, ಶೋಷಿತ, ಕಾರ್ಮಿಕ, ಮಹಿಳಾ ಸಮುದಾಯಗಳ ಕಲ್ಯಾಣಕ್ಕಾಗಿ ರಾಜ್ಯಗಳು ಕಾಯ್ದೆ ಕಾನೂನು, ಯೋಜನೆ, ಕಾರ್ಯಕ್ರಮಗಳನ್ನು ರೂಪಿಸುವಾಗ ಗಮನದಲ್ಲಿಟ್ಟುಕೊಳಬೇಕಾದ ಶ್ರೇಷ್ಠ ತತ್ವಗಳನ್ನು ಸೇರಿಸಲಾಗಿದೆ. ಸಂವಿಧಾನದ 73 ಮತ್ತು 74ನೇ ತಿದ್ದುಪಡಿಯನ್ವಯ 9ನೇ ಭಾಗದ 243(ಡಿ) ಅಡಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳು ಹಾಗೂ ಮಹಿಳಾ ಸಮುದಾಯಗಳಿಗೆ ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ ಸ್ಥಾನಗಳ ಮೀಸಲಾತಿಯನ್ನು ಹಾಗೂ 9 ಎ ಭಾಗದ 243(ಟಿ) ಅಡಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳು ಹಾಗೂ ಮಹಿಳಾ ಸಮುದಾಯಗಳಿಗೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸ್ಥಾನಗಳ ಮೀಸಲಾತಿಯನ್ನು ಕಲ್ಪಿಸಲಾಗಿದೆ.

ಕೇಲವೆ ವರ್ಗಗಳಿಗೆ ಸೀಮಿತವಾಗಿದ್ದ ರಾಜಕೀಯ ಹಕ್ಕುಗಳಾದ ಮತದಾನದ ಹಕ್ಕು ಮತ್ತು ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕುಗಳನ್ನು ಭಾರತದ ಪ್ರತಿಯೊಬ್ಬ ವ್ಯಕ್ತಿಯು ಪಡೆಯುವಂತಾಗಬೇಕು ಎಂದು ಸ್ವತಂತ್ರ ಪೂರ್ವದಿಂದಲೇ ಹೋರಾಡುತ್ತಾ ಬಂದಿದ್ದ ಅಂಬೇಡ್ಕರ್‌ರವರು ಸಂವಿಧಾನದ ವಿಧಿ 325 ರಲ್ಲಿ ಧರ್ಮ, ಮೂಲವಂಶ, ಜಾತಿ ಅಥವಾ ಲಿಂಗದ ಆಧಾರಗಳ ಮೇಲೆ ಯಾರೇ ವ್ಯಕ್ತಿಯು ಮತದಾರರ ಪಟ್ಟಿಯಲ್ಲಿ ಸೇರಲು ಅನರ್ಹನಾಗದಿರುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. ಇಂದು ಪ್ರತಿಯೊಬ್ಬ ಭಾರತೀಯ ಅರ್ಹ (18 ವರ್ಷ ಮೇಲ್ಪಟ್ಟ) ಮತದಾರರಿಗೂ ತಮ್ಮ ಪ್ರತಿನಿಧಿಗಳನ್ನು ಲೋಕಸಭೆ ಮತ್ತು ರಾಜ್ಯಗಳ ವಿಧಾನ ಸಭೆಗಳಿಗೆ ಆಯ್ಕೆ ಮಾಡಲು ಸಂವಿಧಾನದ ವಿಧಿ 326 ರನ್ವಯ ವಯಸ್ಕ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿದೆ.

ಬಹು ಹಿಂದಿನಿಂದಲೂ ಕೆಳ ವರ್ಗಗಳು ತಮ್ಮ ಸಾಮಾಜಿಕ ಮತ್ತು

ರಾಜಕೀಯ ಹಕ್ಕುಗಳಿಂದ ವಂಚಿತವಾಗಿದ್ದವು. ಅಂಬೇಡ್ಕರ್‌ವರು ಸಮಾಜದಲ್ಲಿ ಉಂಟಾಗಿದ್ದ ಅಸಮಾನತೆಯನ್ನು ಸರಿದೂಗಿಸುವ ಹಿನ್ನೆಲೆಯಲ್ಲಿ ರಾಜಕೀಯ ಮೀಸಲಾತಿ ಅವಕಾಶಗಳನ್ನು ಸಾಂವಿಧಾನಿಕವಾಗಿಯೇ ದೊರಕಿಸಿಕೊಡಲು ಪ್ರಯತ್ನಿಸಿ ಯಶಸ್ವಿಯಾದರು. ಸಂವಿಧಾನದ ವಿಧಿ 330 ಮತ್ತ 332 ರನ್ವಯ ಕ್ರಮವಾಗಿ ಲೋಕಸಭೆಯಲ್ಲಿ ಮತ್ತು ರಾಜ್ಯಗಳ ವಿಧಾನ ಸಭೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸ್ಥಾನಗಳ ಮೀಸಲಾತಿಯನ್ನು ಒದಗಿಸಿಕೊಡಲಾಯಿತು. ಇದರಿಂದಾಗಿ ಆ ವರ್ಗಗಳ ಪ್ರತಿನಿಧಿಗಳು ಶಾಸನ ಸಭೆಯನ್ನು ಪ್ರವೇಶಿಸಿ ತಮ್ಮ ವರ್ಗಗಳ ಹಿತ ಕಾಯುವ ಕಾಯ್ದೆ ಕಾನೂನು ರಚನೆಯ ಕಾರ್ಯದಲ್ಲಿ ತೊಡಗಲು ಅವಕಾಶವಾಗಿದೆ. ಮಹಿಳೆಯರಿಗೆ ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ 33 ರಷ್ಟು ಮೀಸಲಾತಿ ನೀಡಬೇಕೆಂಬ ಬಹು ದಶಕಗಳ ಹೋರಾಟದ ಫಲವಾಗಿ 'ಮಹಿಳಾ ಮೀಸಲಾತಿ ವಿಧೇಯಕ-2023' (ನಾರಿ ಶಕ್ತಿ ವಂದನಾ ಅಧಿನಿಯಮ) 19 ಸೆಪ್ಟಂಬರ್ 2023 ರಂದು ಲೋಕಸಭೆಯಲ್ಲಿ ಮಂಡನೆಯಾಗಿ ಸೆಪ್ಟಂಬರ್ 20 ರಂದು ಲೋಕಸಭೆಯಲ್ಲಿ, 21 ರಂದು ರಾಜ್ಯ ಸಭೆಯಲ್ಲಿ ಪಾಸಾಗಿ 28 ಸೆಪ್ಟಂಬರ್ 2023 ರಂದು ರಾಷ್ಟ್ರಪತಿಗಳ ಅನುಮೋದನೆ ಪಡೆಯುವುದರೊಂದಿಗೆ ಸಂವಿಧಾನಕ್ಕೆ 106ನೇ ತಿದ್ದುಪಡಿ ತರಲಾಯಿತು. 2026 ರ ಕ್ಷೇತ್ರ ಪುನರ್ ವಿಂಗಡಣೆಯ ನಂತರ ಕೇಂದ್ರ ಮತ್ತು ರಾಜ್ಯ ಶಾಸಕಾಂಗಗಳ ನೀತಿ ನಿರೂಪಣೆಯಲ್ಲಿ ಮಹಿಳೆಯರ ದೊಡ್ಡ ಮಟ್ಟದ ಪಾಲ್ಗೊಳ್ಳುವಿಕೆಗೆ ಕಾರಣವಾಗಲಿದೆ.

ಕಾನೂನು ಮಂತ್ರಿಯಾಗಿ ಹಿಂದೂ ಮಹಿಳೆಯರಿಗೆ ವಿವಾಹ ಮತ್ತು ವಿಚ್ಛೇದನ, ಆಸ್ತಿ, ದತ್ತು ಮತ್ತು ನಿರ್ವಹಣೆ, ಸಣ್ಣ ಮಕ್ಕಳು ಮತ್ತು ಅವರ ಸಂರಕ್ಷಣೆ ಜವಾಬ್ದಾರಿ ಅಂಶಗಳಿಗೆ ಸಂಬಂಧಿಸಿದಂತೆ ಸಮಾನ ಹಕ್ಕುಗಳನ್ನು ಕಲ್ಪಿಸುವುದಕ್ಕಾಗಿ 'ಹಿಂದೂ ಕೋಡ್ ಬಿಲ್'ನ್ನು ರೂಪಿಸಿ ಸಂಸತ್ತಿನಲ್ಲಿ ಮಂಡಿಸಿದರು. ಅದು ಸಂಸತ್ತಿನಲ್ಲಿ ಒಪ್ಪಿತವಾಗದ ಕಾರಣ ತಮ್ಮ ಮಂತ್ರಿ ಸ್ಥಾನಕ್ಕೆ 1951 ಸೆಪ್ಟಂಬರ್ 27 ರಂದು ರಾಜಿನಾಮೆ ನೀಡಿದರು. ಅನಾದಿ ಕಾಲದಿಂದಲೂ ಮಹಿಳಾ ವರ್ಗವು ಪುರುಷ ಪ್ರಧಾನ ವ್ಯವಸ್ಥೆಯ ಸುಳಿಯಲ್ಲಿ ಸಿಕ್ಕು ತಮ್ಮ ಹಕ್ಕುಗಳನ್ನೇ ಕಳೆದುಕೊಂಡಿತ್ತು. ಭಾರತ ಸಂವಿಧಾನದ ಮೂಲಭೂತ ಹಕ್ಕುಗಳ ಭಾಗದಲ್ಲಿ, ರಾಜ್ಯ ನೀತಿ ನಿರ್ದೇಶಕ ತತ್ವಗಳ ಭಾಗದಲ್ಲಿ ಹಾಗೂ ಮೂಲಭೂತ ಕರ್ತವ್ಯಗಳ ಭಾಗದಲ್ಲಿ ಲಿಂಗ ತಾರತಮ್ಯ ಹೋಗಲಾಡಿಸುವ ವಿಫುಲ ಅವಕಾಶಗಳನ್ನು ಒದಗಿಸಿದ್ದಾರೆ. ಮಹಿಳೆಯು ಘನತೆ ಗೌರವದಿಂದ ಬದುಕುವಂತೆ ಅವರು ತರಲು ಹೋರಟಿದ್ದ ಹಿಂದೂ ಕೋಡ್ ಬಿಲ್ ಸಂಸತ್ತಿನಲ್ಲಿ ಬಿದ್ದು ಹೋದರೂ ಕೂಡ ಅದರ ಸ್ಫೂರ್ತಿಯ ಭಾಗವಾಗಿ ಹಿಂದೂ ವಿವಾಹ ಕಾಯ್ದೆ-1955, ಹಿಂದೂ ದತ್ತಕ ಮತ್ತು ಜೀವನಾಂಶ ಕಾಯ್ದೆ-1956, ಹಿಂದೂ ಉತ್ತರಾಧಿಕಾರ ಕಾಯ್ದೆ-1956, ವರದಕ್ಷಿಣೆ ನಿಷೇಧ ಕಾಯ್ದೆ-1961, ಹೆರಿಗೆ

ಭತ್ಯೆ ಕಾಯ್ದೆ–1961, ಸಮಾನ ವೇತನ ಕಾಯ್ದೆ–1976, ಬಾಲ್ಯ ವಿವಾಹ (ತಡೆಗಟ್ಟುವಿಕೆ) ಕಾಯ್ದೆ (ತಿದ್ದುಪಡಿ) 1979, ರಾಷ್ಟ್ರೀಯ ಮಹಿಳಾ ಆಯೋಗ ಕಾಯ್ದೆ–1990 ಹೀಗೆ ಮುಂತಾದ ಕಾನೂನುಗಳು ಜಾರಿಗೊಂಡು ಮಹಿಳೆಗೆ ರಕ್ಷಣೆ ಮತ್ತು ಸಾಮಾಜಿಕ ನ್ಯಾಯವನ್ನು ಒದಗಿಸುತ್ತಿವೆ.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರ ಸಮಸ್ಯೆಗಳ ಕುರಿತಾದ ದೂರುಗಳನ್ನು ಸ್ವೀಕರಿಸಲು ಮತ್ತು ಅವರಿಗೆ ತಲುಪಬೇಕಾದ ಸಾಂವಿಧಾನಿಕ ಹಾಗೂ ಕಾನೂನಾತ್ಮಕ ಸೌಲಭ್ಯಗಳು ತಲುಪುವಂತೆ ಕ್ರಮ ಕೈಗೊಂಡು ಹಿತರಕ್ಷಿಸಲು ಸಂವಿಧಾನದ ವಿಧಿ 338 ರನ್ವಯ 'ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗ' ಸ್ಥಾಪಿಸಲಾಯಿತು. 2003 ರಲ್ಲಿ ಸಂವಿಧಾನಕ್ಕೆ 89ನೇ ತಿದ್ದುಪಡಿಯನ್ನು ತರುವ ಮೂಲಕ 338ಎ ವಿಧಿ ಸೇರ್ಪಡೆ ಮಾಡಿ ಪರಿಶಿಷ್ಟ ಪಂಗಡಗಳಿಗಾಗಿ ಪ್ರತ್ಯೇಕ 'ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗ'ವನ್ನು ರಚಿಸಲಾಯಿತು. ಭಾರತದ ರಾಜ್ಯ ಕ್ಷೇತ್ರದಲ್ಲಿ ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಹಿಂದುಳಿದ ವರ್ಗಗಳ ಸ್ಥಿತಿಗತಿಗಳನ್ನು ಅಧ್ಯಯನಗೈಯಲು ಮತ್ತು ಅವರು ಅನುಭವಿಸುವ ಸಮಸ್ಯೆಗಳನ್ನು ಅನ್ವೇಷಿಸಿ ಅವುಗಳಿಗೆ ಪರಿಹಾರ ಮಾರ್ಗಗಳನ್ನು ಸೂಚಿಸಲು ಹಾಗೂ ಅವರ ಸ್ಥಿತಿಗತಿಯನ್ನು ಉತ್ತಮಪಡಿಸಲು ಹಿಂದುಳಿದ ವರ್ಗಗಳಿಗಾಗಿಯೇ ಪ್ರತ್ಯೇಕ ಆಯೋಗ ಸ್ಥಾಪನೆಗೆ ಒಕ್ಕೂಟವು ಅಥವಾ ಯಾವುದೇ ರಾಜ್ಯವು ಕ್ರಮ ಕೈಗೊಳ್ಳಬೇಕೆಂದು ಸಂವಿಧಾನದ ವಿಧಿ 340 ರಲ್ಲಿ ಸೇರಿಸಲಾಗಿದೆ. ಆದರೆ 1993ರಷ್ಟು ತಡವಾಗಿ ಶಾಸನೀಯ ಸ್ಥಾನಮಾನದೊಂದಿಗೆ ಕೇಂದ್ರದಲ್ಲಿ 'ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗ' ಸ್ಥಾಪನೆಯಾಯಿತು. ತೀರಾ ಇತ್ತೀಚೆಗೆ 2018ರಲ್ಲಿ ಸಂವಿಧಾನಕ್ಕೆ 102ನೇ ತಿದ್ದುಪಡಿಯನ್ನು ತರುವ ಮೂಲಕ 338ಬಿ ವಿಧಿಯ ಅಡಿಯಲ್ಲಿ 'ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗ'ಕ್ಕೆ ಸಂವಿಧಾನಿಕ ಸ್ಥಾನಮಾನ ದೊರೆತದ್ದು ಸಂತಸದ ಸಂಗತಿಯಾಗಿದೆ. ಸಂವಿಧಾನದ ಮೂಲಕ ಇಂದು ಶೋಷಿತ, ಹಿಂದುಳಿದ ಮತ್ತು ಮಹಿಳೆಯರ ಹಕ್ಕುಗಳು ರಕ್ಷಣೆಯಾಗಿ ಸಾಮಾಜಿಕ ನ್ಯಾಯದ ಹಾದಿ ತೆರೆದಂತಾಗಿದೆ.

**ಉಪಸಂಹಾರ:**

ಸಾಮಾಜಿಕ ವ್ಯವಸ್ಥೆಯ ತಳ ಸಮುದಾಯಗಳು ಅನುಭವಿಸಿದ ಸಂಕಷ್ಟಗಳನ್ನು ದೂರ ಮಾಡಿ 'ಸರ್ವರಿಗೂ ಸಮ ಬಾಳು, ಸರ್ವರಿಗೂ ಸಮ ಪಾಲು' ಎಂಬ ತತ್ವ ಸಾಕಾರಗೊಳಿಸುವುದೇ ಸಾಮಾಜಿಕ ನ್ಯಾಯವಾಗಿದೆ. ಅಂಬೇಡ್ಕರ್ ಅವರು ಜಾತಿ, ಲಿಂಗ, ವರ್ಗ, ಧರ್ಮ ಮತ್ತು ಜನಾಂಗೀಯತೆಯಂತಹ ವಿವಿಧ ರೀತಿಯ ವ್ಯವಸ್ಥಿತ ತಾರತಮ್ಯ ಮತ್ತು ಶೋಷಣೆಯನ್ನು ಪರಿಹರಿಸಲು ಶ್ರಮಿಸಿ ಶೋಷಿತ ಸಮುದಾಯಗಳ

ರಕ್ಷಣೆ ಮತ್ತು ಪ್ರಗತಿಯನ್ನು ಖಚಿತಪಡಿಸಿಕೊಳ್ಳಲು ಸಾಂವಿಧಾನಿಕ ಕಾನೂನು ಮಾರ್ಗದ ಮೂಲಕ ಪರಿಹಾರ ಒದಗಿಸಿದ್ದಾರೆ. ಸಂವಿಧಾನದ ಕೊನೆಯ ಅಂಗಿಕಾರಕ್ಕಾಗಿ 1949 ನವೆಂಬರ್ 14 ರಂದು ರಾಜ್ಯಾಂಗ ಸಭೆ ಸೇರಿದಾಗ ಅಂಬೇಡ್ಕರ್ ಮಾತನಾಡುತ್ತಾ "ನಾಡಿನಲ್ಲಿ ಪ್ರಜಾರಾಜ್ಯ ಪದ್ಧತಿ ಉಳಿದು ಬೆಳೆಯಬೇಕಾದರೆ ಮೂರು ವಿಧದಲ್ಲಿ ನಾವು ಎಚ್ಚರ ವಹಿಸಬೇಕಾಗಿದೆ, ಮೊದಲನೆಯದಾಗಿ: ನಮ್ಮೆದುರು ಇರಿಸಿಕೊಂಡ ಆರ್ಥಿಕ ಹಾಗೂ ಸಾಮಾಜಿಕ ಧ್ಯೇಯಗಳನ್ನು ಸಾಧಿಸುವುದಕ್ಕೆ ಸಂವಿಧಾನಕ್ಕೆ ಒಳಪಟ್ಟು ಹೋರಾಟ ನಡೆಸಬೇಕಲ್ಲದೆ ಸತ್ಯಾಗ್ರಹ, ಅಸಹಕಾರದಂತಹ ಸರಕಾರ ವಿರೋಧವಾದ ಕ್ರಮಗಳನ್ನು ಅನುಸರಿಸಬಾರದು. ಅಂಥ ಕ್ರಮಗಳು ಅರಾಜಕತೆಗೆ ಕಾರಣವಾಗಬಲ್ಲವು. ಎರಡನೇಯದಾಗಿ: ವೀರ ಪೂಜೆಯ ಮನೋವೃತ್ತಿಯಿಂದ ಉಂಟಾಗುವ ಅಪಾಯ. ಮೂರನೇಯದಾಗಿ: "ರಾಜಕೀಯ ಪ್ರಜಾತಂತ್ರದಿಂದ ತೃಪ್ತರಾಗದೆ ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರದಲ್ಲಿಯೂ ಆ ತತ್ವಗಳು ಮೂರ್ತರೂಪವನ್ನು ತಾಳಬೇಕು". ಜಾತಿ ಮತ, ಪಂಥಗಳಿಂದ ಬೇರ್ಪಟ್ಟು ನಿಂತ ಜನ ಒಂದಾಗಿ, ಒಂದು ರಾಷ್ಟ್ರವಾಗಿ ಬಾಳುವಂತಾಗಲೆಂಬ ಹಾರೈಕೆಯೊಂದಿಗೆ 45 ನಿಮಿಷಗಳ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು. ಒಂದು ಸಂವಿಧಾನ ಒಳ್ಳೆಯದೊ ಕೆಟ್ಟದ್ದೊ ಎನ್ನುವುದು ಅದನ್ನು ಕಾರ್ಯಗತಗೊಳಿಸುವವರನ್ನು ಅವಲಂಬಿಸುತ್ತದೆ ಎಂದು ಪ್ರಜಾಪ್ರಭುತ್ವದ ಕುರಿತು ಜನತೆಯು ನಿರಂತರ ಜಾಗೃತರಾಗಿರುವಂತೆ ಎಚ್ಚರಿಸಿದ್ದಾರೆ. ಅಂಬೇಡ್ಕರ್‌ರು ಎಳೆದು ತಂದ ವಿಮೋಚನಾ ಹೋರಾಟದ ರಥವನ್ನು ಮುನ್ನಡೆಸುವ ಜವಾಬ್ದಾರಿ ಈ ಸಮಾಜದ ಮೇಲಿದೆ.

## ಪರಾಮರ್ಶನ ಗ್ರಂಥಗಳು:


1. ನಾನಕ್‌ಚಂದ್ ರತ್ತು (ಮೂಲ), ಶಿವರಾಂ ಎನ್. ಆರ್. (ಸಂ), (2019), ಡಾ. ಅಂಬೇಡ್ಕರ್ ಜೊತೆಗಿನ ಅನುಭವಗಳು, ಸಮತಾ ಪ್ರಕಾಶನ, ಮೈಸೂರು.
2. ಇನಾಂದಾರ್ ವಿ. ಎಂ. , (2017), ಡಾ. ಬಿ.ಆರ್. ಅಂಬೇಡ್ಕರ್ ವ್ಯಕ್ತಿ ಮತ್ತು ವಿಚಾರ, ವಸಂತ ಪ್ರಕಾಶನ, ಬೇಂಗಳೂರು.
3. ಜಸ್ಟೀಸ್ ಕೊತ್ತಪಲ್ಲಿ ಪುನ್ನಯ್ಯ (ಮೂಲ), ಸುಜ್ಞಾನಮೂರ್ತಿ ಬಿ. (ಅನು), (2020), ಅಂಬೇಡ್ಕರ್ ದೃಷ್ಟಿಯಲ್ಲಿ ಸಾಮಾಜಿಕ ನ್ಯಾಯ, ಲಡಾಯಿ ಪ್ರಕಾಶನ, ಗದಗ.
4. ಸತ್ಪಾಲ್ ಪುಲಾನಿ & ನಾರಾಯಣ ಪಿ. ಎಸ್. , (2018), ಭಾರತ ಸಂವಿಧಾನ, ಕರ್ನಾಟಕ ಲಾ ಜರ್ನಲ್ ಪಬ್ಲಿಕೇಶನ್ಸ್, ಬೆಂಗಳೂರು.
5. ವಸಂತ ಮೂನ್ (ಮೂಲ), ಸನದಿ ಬಿ. ಎ. (ಅನು), (2019), ಡಾ. ಬಾಬಾಸಾಹೇಬ್ ಅಂಬೇಡ್ಕರ್, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ.
6. ಶಂಕರ್‌ರಾವ್ ಚ. ನ. , (2012), ಸಾಮಾಜಿಕ ಆಂದೋಲನಗಳ ಪಕ್ಷಿ ನೋಟ, ಜೈ ಭಾರತ ಪ್ರಕಾಶನ, ಮಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4. 0 International License.